79 (196) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಸ್ಥಳಗಳಿಗೆ ಹೊಸದಾಗಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಲಾಗಿದೆ ;

ಆ) ಈ ಪೈಕಿ ಎಷ್ಟು ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ ;

ಇ) ಉಳಿದ ಕಾಲೇಜುಗಳನ್ನು ಪ್ರಾರಂಭಿಸಲು ಇಲ್ಲಿಯವರೆಗೆ ಸಾಧಿಸಿರುವ ಪ್ರಗತಿ ಏನು ;

ಈ) ಬೀದರ್ ವೈದ್ಯಕೀಯ ಕಾಲೇಜಿನ ಸ್ಥಾಪನೆಯ ಕೆಲಸ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು ;

ಉ) ಉಳಿದಿರುವ ಎಲ್ಲಾ ಹೊಸ ಕಾಲೇಜುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮವೇನು ;

ಊ) ಈ ಎಲ್ಲಾ ಹೊಸ ಕಾಲೇಜುಗಳ ಸ್ಥಾಪನೆಗೆಗಾಗಿ ಇಲ್ಲಿಯವರೆಗೂ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಾಗೂ ಖರ್ಚು ಮಾಡಿರುವ ಹಣದ ವಿವರಗಳೇನು (ಕಾಲೇಜುವಾರು ವಿವರಗಳನ್ನು ಒದಗಿಸುವುದು) ?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಬೆಳಗಾಂ, ಹಾಸನ, ಮಂಡ್ಯ, ರಾಯಚೂರು, ಬೀದರ್ ಮತ್ತು ಶಿವಮೊಗ್ಗ.

ಆ) ಮೂರು (3)

ಇ) ಕಟ್ಟಡ ಕಾಮಗಾರಿ ಕೆಲಸಗಳು ಮುಕ್ತಾಯ ಹಂತದಲ್ಲಿದೆ ಮತ್ತು ಬೋಧಕ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಲಾಗುತ್ತಿದೆ ಉಪಕರಣಗಳ ಖರೀದಿ ಪ್ರಕ್ರಿಯೆಯಲ್ಲಿದೆ.

ಈ) ಕಟ್ಟಡ ಕಾಮಗಾರಿಯು ನಿಧಾನವಾಗಿ ಸಾಗುತ್ತಿದ್ದ ಕಾರಣ ಮತ್ತು ಬೋಧಕ ಸಿಬ್ಬಂದಿ ಕೊರತೆಯಿಂದ ಎಂ.ಸಿ.ಐ. ತಂಡವು ಅನುಮತಿ ನೀಡಿರುವುದಿಲ್ಲ.

ಉ) ಮೂಲಭೂತ ಸೌಕರ್ಯಗಳಾದ ಯಂತ್ರೋಪಕರಣಗಳ ಸಂಗ್ರಹ, ಕಟ್ಟಡದ ಕಾಮಗಾರಿ ಕೆಲಸ ಮುಗಿದಿದ್ದು, ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕಾತಿ ಮುಗಿಯುವ ಹಂತದಲ್ಲಿದ್ದು, ಕೇಂದ್ರ ಸರ್ಕಾರ ಅನುಮತಿ ನೀಡಿದಲ್ಲಿ ಉಳಿದಿರುವ ಹೊಸ ವೈದ್ಯಕೀಯ ಕಾಲೇಜುಗಳನ್ನು ಮುಂದಿನ ವರ್ಷದಿಂದ ಪ್ರಾರಂಭಿಸಲಾಗುವುದು. (2007–08)

ಊ) ವಿವರಣಾ ಪಟ್ಟಿಯನ್ನು ಲಗತ್ತಿಸಿದೆ.

ಹೊಸದಾಗಿ ಪ್ರಾರಂಭಿಸಲಾದ 6 ವೈದ್ಯಕೀಯ ಕಾಲೇಜುಗಳಿಗೆ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಅನುದಾನದ ವಿವರ

ರೂ. ಕೋಟಿಗಳಲ್ಲಿ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಟೆಂಡರ್ ಮೊತ್ತ	ಉಪಕರಣಗಳ ಮೊತ್ತ	ಒಟ್ಟು	ಬಿಡುಗಡೆಯಾದ ಹಣ	ಖರ್ಚಾಗಿರುವ ಹಣ	ಉಳಿಕೆ ಹಣ	ಪೆಂಡಿಂಗ್ ಬಿಲ್ಲುಗಳು	ಮೊದಲನೇ ಹಂತ ಮುಗಿಯುವುದಕ್ಕೆ ಬೇಕಾಗಿರುವ ಹಣ	ಷರಾ
01.	ಮಂಡ್ಯ	20.00	3.29	23.29	18.29	18.29	–	0.93	5.00	
02.	ಬೀದರ್	18.71	3.00	21.71	21.71	11.41	–	8.00	15.00	ಹೆಚ್ಚುವರಿ–2.5 ಪರಿಷ್ಕೃತ–12.5
03.	ರಾಯಚೂರು	18.90	3.25	22.15	18.25	18.54	–	5.00	3.90	9.10 (ಹೆಚ್ಚುವರಿ ಅಂದಾಜನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದೆ – ಒಟ್ಟು 12.00 ಕೋಟಿ)
04.	ಬೆಳಗಾಂ	17.33	3.29	21.62	18.29	14.30	3.99	2.67	3.33	
05.	ಶಿವಮೊಗ್ಗ	20.00	3.25	23.25	18.25	5.06	3.46	0.19	5.00	
06.	ಹಾಸನ	22.00	3.25	25.25	18.25	17.70	0.55	5.00	7.61	
	ಒಟ್ಟು			**137.52**	**104.33**	**93.83**	**11.66**	**16.79**	**34.80**	